ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ., ಮೂಡಿಗೆರೆ.

ಸಿ.ಸಿ.ಸಂ.**1050/2021**

ಪಿರ್ಯಾದುದಾರರು : ರಾಜ್ಯದ ಪರ ಮೂಡಿಗೆರೆ ಠಾಣಾ ಆರಕ್ಷಕರು
*(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)*

ವಿರುದ್ಧ

ಆರೋಪಿಗಳು : **1.** ಸುರಕ್ಷಿತ್.ಕೆ.ಎಸ್ ಬಿನ್ ಸುಬ್ಬೇಗೌಡ,
ವಯಸ್ಸು ಸುಮಾರು 22 ವರ್ಷ.

**2.** ಸುಮಿತ್ರ ಬಿನ್ ದಬ್ಬೇಗೌಡ,
ವಯಸ್ಸು ಸುಮಾರು 42 ವರ್ಷ.

**3.** ನವೀನ್ ಕುಮಾರ್.ಕೆ.ಎಸ್ ಬಿನ್ ನಂಜುಂಡೇಗೌಡ,
ವಯಸ್ಸು ಸುಮಾರು 28 ವರ್ಷ.

**4.** ಪ್ರಸನ್ನ.ಕೆ.ಎನ್ ಬಿನ್ ನಿಂಗೇಗೌಡ,
ವಯಸ್ಸು ಸುಮಾರು 33 ವರ್ಷ.

ಎಲ್ಲರ ವಾಸಃ ಕಂಬರಡಿ ಗ್ರಾಮ, ಗೌಡಹಳ್ಳಿ ಅಂಚೆ,
ಗೋಣಿಬೀಡು ಹೋಬಳಿ, ಮೂಡಿಗೆರೆ ತಾಲ್ಲೂಕು.

ದಂಡ ಪ್ರಕ್ರಿಯಾ ಸಂಹಿತೆ ಕಲಂ.**313** ರ ಮೇರೆಗೆ ಆರೋಪಿಗಳ ಹೇಳಿಕೆ

ಪ್ರಶ್ನೆ-1: ಮಾನ್ಯ ಅಭಿಯೋಜನೆಯ ಪರ ಕೊಟ್ಟಂತಹ ಸಾಕ್ಷಿಗಳನ್ನು ಕೇಳಿದ್ದೀರಾ?

ಉಃ

ಪ್ರಶ್ನೆ-2: ಚಾಸಾ-4/ಪ್ರಾಸಾ-3 ಚಿದಾನಂದ್.ಹೆಚ್ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 17.02.2019 ರಂದು ಚಾಸಾ-5 ರವರು ಚಾಸಾ-1 ರವರಿಗೆ ಪತ್ರ ನೀಡಿ ಪ್ರಾಣಿಗಳ ಅಂಗಾಂಗ ಮಾರಾಟ ಆಗುತ್ತಿರುವ ಬಗ್ಗೆ ತಿಳಿಸಿ ಜಂಟಿ ಕಾರ್ಯಚರಣೆ ಮಾಡುವ ಪ್ರಕಾರ ಚಾಸಾ-1 ರವರು ತಮಗೆ ಮಾಹಿತಿ ತಿಳಿಸಿ ನಮ್ಮನ್ನು ಚಾಸಾ-5 ರವರೊಂದಿಗೆ ಕಳುಹಿಸಿಕೊಟ್ಟಿರುತ್ತಾರೆ. ಆ ದಿನ ರಾತ್ರಿ ಸುಮಾರು 9.30 ಕ್ಕೆ ಇಲಾಖಾ ವಾಹನದಲ್ಲಿ ಹೊರಟು ಕೆತ್ತೆಗಂಡಿಯ ಬಳಿ ಹೇಮಾವತಿ ನದಿಯ ಸೇತುವೆ ಹತ್ತಿರ ವಾಹನ ನಿಲ್ಲಿಸಿಕೊಂಡು ಕಾಯುತ್ತಿರುವಾಗ ತಾವು ಸ್ವ ತಪಾಸಣಾ ವರದಿಯನ್ನು ತಯಾರಿಸಿಕೊಂಡಿರುತ್ತೇವೆ. ಆನಂತರ ಆ ಸ್ಥಳದಿಂದ ಕಾಲ್ನಡಿಗೆಯಲ್ಲಿ 150 ಮೀಟರ್ ದೂರದಲ್ಲಿ ಇದ್ದ ಬಸ್ ಸ್ಟ್ಯಾಂಡ್ ಬಳಿ ಹೋಗಿ ನೋಡಿದಾಗ 4-5 ಜನ ಇದ್ದು ಚಾಸಾ-5 ರವರ ಆದೇಶದಂತೆ ತಾವು ಅಲ್ಲಿದ್ದ ವ್ಯಕ್ತಿಗಳನ್ನು ಹಿಡಿದುಕೊಂಡಿರುತ್ತೇವೆ. ಬಸ್ ಸ್ಟ್ಯಾಂಡ್ ಮುಂದೆ ಒಂದು ಸ್ಕೂಟಿ ನಿಂತಿದ್ದು ಅದರ ನೋಂದಣಿ ಸಂ.KA-EE-2516 ಆಗಿದ್ದು ಆ ಸ್ಕೂಟಿಯ ಮಧ್ಯಭಾಗದಲ್ಲಿ ಒಂದು ಪ್ಲಾಸ್ಟಿಕ್ ಚೀಲ ಹಾಗೂಅದರಲ್ಲಿ ಕಡವೆಯ

ಕೊಂಬುಗಳು ಇರುವುದು ಕಂಡುಬಂತು. ಅವುಗಳ ಬಗ್ಗೆ ಆರೋಪಿತರಲ್ಲಿ ಕೇಳಿದಾಗ ಕೊಂಬುಗಳನ್ನು ಮಾರಾಟ ಮಾಡಲು ತಂದಿದ್ದು ಯಾರೋ ಒಬ್ಬರು ಖರೀದಿದಾರರು ಬರುತ್ತಿದ್ದಾರೆ ಎಂದು ಹೇಳಿದರು.

ಮುಂದುವರೆದು, ಆನಂತರ ಆರೋಪಿತರನ್ನು ನಿಯಮಾನುಸಾರ ದಸ್ತಗಿರಿ ಮಾಡಿ ಅವರ ವಶದಲ್ಲಿ ಸಿಕ್ಕ ಕಡವೆ ಕೊಂಬುಗಳನ್ನು ವಶಕ್ಕೆ ಪಡೆದು ರಾ.10.15 ರಿಂದ 11.30 ರವರೆಗೂ ಮಹಜರ್ ಕ್ರಮ ಜರುಗಿಸುವ ಮೂಲಕ ಅವುಗಳನ್ನು ವಶಕ್ಕೆ ಪಡೆಯಲಾಗಿದೆ. ಆನಂತರ ಆರೋಪಿತರು ಹಾಗೂ ವಶಕ್ಕೆ ಪಡೆದ ಮಾಲನ್ನು ಚಾಸಾ-1 ರವರ ಕಚೇರಿಗೆ ತಂದು ಅವರ ಸಮಕ್ಷಮ ಹಾಜರುಪಡಿಸಿದೆವು. ದಿ.18.02.2019 ರಂದು ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಚಿಕ್ಕಮಗಳೂರು ಕಾರಗೃಹಕ್ಕೆ ಬಿಟ್ಟುಬಂದಿರುತ್ತೇವೆ. ದಿ.19.02.2019 ರಂದು ಚಾಸಾ-2 ರವರು ಶೋಧನಾ ವಾರೆಂಟ್ ನೀಡಿ ಆರೋಪಿತರ ಮನೆ ಜಪ್ತು ಮಾಡುವಂತೆ ಆದೇಶಿಸಿದ್ದು ಆ ದಿನ ನಮ್ಮೊಂದಿಗೆ ಚಾಸಾ-11 ರವರು ಇದ್ದರು. ಆ ದಿನ ಮದ್ಯಾಹ್ನ 1.15 ರ ಸಮಯಕ್ಕೆ 1 ನೇ ಆರೋಪಿಯ ಮನೆಯ ಬಳಿ ಹೋಗಿ ನೋಡಿದಾಗ ಮನೆಯ ಬೀಗ ಹಾಕಿದ್ದು, ಚಾಸಾ-12 ಮತ್ತು 1 ನೇ ಆರೋಪಿಯ ತಾಯಿ ಸಮಕ್ಷಮ ಬೀಗ ತಗಿಸಿ ಮನೆಯನ್ನು ಶೋಧನೆ ಮಾಡಿದಾಗ ಮನೆಯ ಹಟ್ಟದ ಮೇಲೆ ಕಡವೆ ಕೊಂಬುಗಳು, ಒಂದು ಕಾಡು ಕುರಿಯ ಕೊಂಬು, ಬಳಸಿದ 12 ಕಾಟ್ರಿಡ್ಜಗಳು ಇದ್ದವು. ಸದರಿ ವಸ್ತುಗಳನ್ನು ಮದ್ಯಾಹ್ನ 1.15 ರಿಂದ 2.00 ರವರೆಗೂ ಮಹಜರ್ ಕ್ರಮ ಜರುಗಿಸಿ ವಶಕ್ಕೆ ಪಡೆದಿದ್ದೇವೆ. ಮಹಜರ್ ಕಾಲಕ್ಕೆ ತಮ್ಮ ಇಲಾಖಾ ಸಿಬ್ಬಂದಿಯವರು ಫೋಟೋಗಳನ್ನು ತೆಗೆದಿದ್ದು ಆ ಫೋಟೋಗಳನ್ನು ತಾನು ಸಿಡಿಗೆ ಅಳವಡಿಸಿ ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿ ದೃಢೀಕರಣ ಪತ್ರ ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉಃ

ಪ್ರಶ್ನೆ-3: ಚಾಸಾ-5/ಪ್ರಾಸಾ-4 ಸುನಿಲ್ ಕುಮಾರ್ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 17.02.2019 ರಂದು ತಾನು, ಚಾಸಾ-8 ಮತ್ತು 9 ರವರೊಂದಿಗೆ ಚಿಕ್ಕಮಗಳೂರಿನಲ್ಲಿ ಗಸ್ತಿನಲ್ಲಿ ಇರುವಾಗ ಮೂಡಿಗೆರಯ ಗೌಡಹಳ್ಳಿಯಲ್ಲಿ 4 ಜನ ವ್ಯಕ್ತಿಗಳು ಪ್ರಾಣಿಗಳ ಅಂಗಾಗವನ್ನು ಮಾರಾಟ ಮಾಡುತ್ತಿದಾರೆ ಎಂದು ಮಾಹಿತಿ ಬಂದಿದ್ದು ಅದರಂತೆ ತಾವುಗಳು ಸದರಿ ಮಾಹಿತಿಯನ್ನು ಚಾಸಾ-1 ರವರಿಗೆ ತಿಳಿಸಿ ಕಾರ್ಯಚರಣೆಗೆ ಸಹಕರಿಸುವಂತೆ ಕೋರಿರುತ್ತೇನೆ. ನಂತರ ಚಾಸಾ-1 ರವರು ತಮ್ಮ ಸಿಬ್ಬಂದಿಗಳಾದ ಚಾಸಾ-6, 7 ಮತ್ತು 10 ರವರನ್ನು ತಮ್ಮೊಂದಿಗೆ ಕಳುಹಿಸಿದ್ದು ತಾವೆಲ್ಲರೂ ಗೌಡಹಳ್ಳಿ ಬಸ್ ನಿಲ್ದಾಣದಿಂದ ಸ್ವಲ್ಪ ಹಿಂದೆ ನಮ್ಮ ವಾಹನಗಳನ್ನು ನಿಲ್ಲಿಸಿ ಬಸ್ ಸ್ಟಾಂಡ್ ಬಳಿ ತಲುಪಿ ನೋಡಿದಾಗ ಅಲ್ಲಿ 4 ಜನ ವ್ಯಕ್ತಿಗಳು ಇದ್ದು ಆ ಪೈಕಿ ಒರ್ವ ಮಹಿಳೆ ಇದ್ದರು. ಸದರಿ ವ್ಯಕ್ತಿಗಳ ಬಳಿ ಇದ್ದ ಒಂದು ಚೀಲದಲ್ಲಿ ಕಡವೆಯ ಕೊಂಬುಗಳು ಇದ್ದ ಹಾಗೇ ಕಂಡುಬಂತು. ಸದರಿ ವಸ್ತುವನ್ನು ತಾವು ಪರಿಶೀಲಿಸಿದಾಗ ಎರಡು ಜೊತೆ ಕಡವೆಯ ಕೊಂಬುಗಳು ದೊರೆತಿದ್ದು, ಒಂದು ಜೊತೆ ಕೊಂಬು ಬುರುಡೆ ಸಮೇತ ಇದ್ದು ಮತ್ತೊಂದು ಜೊತೆ ಕೊಂಬನ್ನು ಮರದ ಆಕಾರದ ಒಂದು ವಸ್ತುವಿಗೆ ಜೋಡಿಸಲಾಗಿತ್ತು. ಸದರಿ ವಸ್ತುಗಳನ್ನು ರಾ.10.15 ರಿಂದ 11.30 ರವರೆಗೂ ಮಹಜರ್ ಬರೆದು ವಶಕ್ಕೆ ಪಡೆದೆವು. ನಂತರ ಸ್ಥಳದಲ್ಲಿ ಸಿಕ್ಕ ವಸ್ತುಗಳನ್ನು ಅರಣ್ಯ ಇಲಾಖೆ ಸಿಬ್ಬಂದಿಯವರಿಗೆ ಕೊಟ್ಟು

ತಾವು ವಾಪಸ್ಸು ಬಂದಿದ್ದೇವೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉಃ

ಪ್ರಶ್ನೆ-4: ಚಾಸಾ-11/ಫ್ರಾಸಾ-5 ಶಿಲ್ಪ, ಇವರು ತಮ್ಮ ಸಾಕ್ಷ್ಯದಲ್ಲಿ 17.02.2019 ರಲ್ಲಿ ಮೂಡಿಗೆರೆ ವಲಯದಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇನ್ನೂ ಹೆಚ್ಚು ಕಾಡುಪ್ರಾಣಿಯ ಅಂಗಾಂಗಗಳು ಸಿಗುವ ಸಾಧ್ಯತೆ ಇದೆ ಎಂದು ತಿಳಿಸಿ ಚಿಕ್ಕಮಗಳೂರಿನ ACF ರವರು ನಿರ್ದೇಶಿಸಿ ಸರ್ಚ್ ವಾರೆಂಟ್ ನೀಡಿದ್ದು ಅದರಂತೆ ತಾನು ದಿ.19.02.2019 ರಂದು ದೇವವೃಂದ ಶಾಖೆಯ ಊರುಬಗೆ ಗ್ರಾಮ, ಕುಂಬರಡಿ ಗ್ರಾಮದಲ್ಲಿನ 2 ನೇ ಆರೋಪಿಯ ಮನೆಗೆ ಸ.5.00 ಗಂಟೆ ಸಮಯಕ್ಕೆ ಬೇಟಿ ನೀಡಿ ಮನೆಯನ್ನು ಶೋಧನೆ ಮಾಡಿದಾಗ ಮನೆಯ ಒಂದು ಕೋಣೆಯ ಹಟ್ಟದ ಮೇಲೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಎರಡು ಕಡಿವೆ ಕೊಂಬು, ಕಾಡುಕುರಿಯ ಕೊಂಬು ಹಾಗೂ ಉಪಯೋಗಿಸಿದ್ದ ಬಂದೂರಿನ ತೋಟೆಗಳು ದೊರಕಿದೆ. ಅವುಗಳನ್ನು ನಿಯಮಾನುಸಾರ ವಶಕ್ಕೆ ಪಡೆದು ಸ.5.45 ಸಮಯದವರೆಗೂ ಮಹಜರ್ ಕ್ರಮ ಜರುಗಿಸಿ ಫೋಟೋಗಳನ್ನು ತೆಗೆಸಿರುತ್ತೇವೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉಃ

ಪ್ರಶ್ನೆ-5: ಚಾಸಾ-15/ಫ್ರಾಸಾ-9 ಕಿರಣ.ಬಿ.ಆರ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 17.02.2019 ರಂದು ಫ್ರಾಸಾ3 ಚಿದಾನಂದ್ ಮತ್ತು ಫ್ರಾಸಾ5 ಶಿಲ್ಪ, ಚಾಸಾ10 ರಘು ಮತ್ತು ತಾನು ಫ್ರಾಸಾ1 ರವರ ನಿರ್ದೇಶನದ ಮೇರೆಗೆ 2 ನೇ ಆರೋಪಿಯ ಮನೆಯಲ್ಲಿ ದಿನಾಂಕ 19.02.2019 ರಂದು ಮ.12.00 ಗಂಟೆಗೆ ಮಹಜರ್ ಕ್ರಮವನ್ನು ಜರುಗಿಸಿ, ಅದಕ್ಕೆ ಸ್ಥಳೀಯ ಪಂಚರು ನಂಜುಂಡೇಗೌಡ, ಚಂದ್ರೇಗೌಡ ಮತ್ತು ಜ್ಯೋತಿ ಚಾಸಾ6 ರಿಂದ 8 ರವರನ್ನು ಬರಮಾಡಿಕೊಂಡಿರುತ್ತೇವೆ. 2 ನೇ ಆರೋಪಿಯ ಮನೆ ಬೀಗ ಹಾಕಿದ್ದು, ಅಲ್ಲಿ ಯಾರು ಇರದ ಕಾರಣ ಪಂಚರ ಸಹಾಯದಿಂದಲೇ ಬೀಗವನ್ನು ತೆರೆಸಿ, ಮನೆ ಒಳಗೆ ತಾವುಗಳು ಶೋಧನೆ ಮಾಡಿದಾಗ ಅಟ್ಟದಲ್ಲಿ ಕಾಡು ಪ್ರಾಣಿಯ ಅಂಗಾಂಗಳು ಕಂಡುಬಂದಿರುತ್ತವೆ. ಅದನ್ನು ಪರಿಶೀಲಿಸಿದಾಗ ಎರಡು ಒಂಟಿ ಕಡವೆ ಕೊಂಬುಗಳು, ಒಂದು ಜೋಡಿ ಕಾಡು ಕುರಿಯ ಕೊಂಬು, ಬಳಸಿದ 12 ಕಾಟ್ರಿಡ್ಜ್ ಗಳು ಇದ್ದವು. ಸದರಿ ವಸ್ತುಗಳನ್ನು ಮಧ್ಯಾಹ್ನ 1.30 ರಿಂದ 3.15 ರವರೆಗೂ ಮಹಜರ್ ಕ್ರಮ ಜರುಗಿಸಿ ವಶಕ್ಕೆ ಪಡೆದಿದ್ದೇವೆ. ಮಹಜರ್ ಕಾಲಕ್ಕೆ ತಾನೇ ಫೋಟೋವನ್ನು ತನ್ನ ಮೊಬೈಲ್ ನಲ್ಲಿ ತೆಗೆದಿರುತ್ತೇನೆ. ಆ ಫೋಟೋಗಳನ್ನು ತಾನು ಪ್ರಿಂಟ್ ಮಾಡಿ ಚಾಸಾ1 ರವರಿಗೆ ನೀಡಿರುತ್ತೇನೆ. ನಂತರ ಮನೆಯ ಬಾಗಿಲನ್ನು ಹಾಕಿ ಬೀಗವನ್ನು ಸೀಲ್ ಮಾಡಲಾಗಿರುತ್ತದೆ. ಮಹಜರ್ ಗೆ ತಾನು ಸಹಿಯನ್ನು ಮಾಡಿರುತ್ತೇನೆ. ಮೇಲೆ ಹೇಳಿದ ಪ್ರಾಣಿಯ ಅಂಗಾಂಗಗಳನ್ನು ತನ್ನ ಮುಂದೆ ವಶಪಡಿಸಿಕೊಳ್ಳಲಾಗಿರುತ್ತದೆ. ತನ್ನ ಜೊತೆ ಪಂಚರು ಸಹಾ ಸಹಿ ಮಾಡಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉಃ

ಪ್ರಶ್ನೆ-6: ಚಾಸಾ-2/ಫ್ರಾಸಾ-1 ಸಂತೋಷ್ ಕುಮಾರ್.ಜಿ., ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ.17.02.2019 ರಂದು ಚಾಸಾ-1 ರವರು ಎಫ್.ಒ.ಸಿ ಪ್ರಕರಣ ಸಂ.26/18-19 ಪ್ರಕರಣವನ್ನು ದಾಖಲು ಮಾಡಿದ್ದು, ಸದರಿ ಪ್ರಕರಣದ ದಾಖಲಾತಿಗಳನ್ನು ತನಿಖಾದಿಕಾರಿಯಾಗಿ ಸ್ವೀಕರಿಸಿರುತ್ತೇನೆ. ತದನಂತರ ಆರೋಪಿತರು ಮತ್ತು ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿಕೊಂಡು, ವಿಚಾರಣಾ ವರದಿಯನ್ನು ತಯಾರಿಸಿ, ಅದನ್ನು ಉಪ ಅರಣ್ಯಾದಿಕಾರಿಗಳು, ಚಿಕ್ಕಮಗಳೂರರುವರಿಗೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉಃ

ಪ್ರಶ್ನೆ-7: ಚಾಸಾ-3/ಫ್ರಾಸಾ-2 ಎನ್.ಕೆ.ನಿರ್ಮಲ, ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ-2 ರವರು ಈ ಹಿಂದೆ ನಡೆಸಿದ ತನಿಖೆಯ ಸಂಬಂಧ ದಾಖಲಾತಿಗಳನ್ನು ಪರಿಶೀಲಿಸಿ, ಆರೋಪಿತರ ವಿರುದ್ಧ ಸೂಕ್ತ ಸಾಕ್ಷ್ಯಧಾರಗಳು ಕಂಡುಬಂದ ಕಾರಣ, ನಾನು ದಿನಾಂಕ.23.06.2021 ರಂದು ಈ ಪ್ರಕರಣದ ಸಂಬಂಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉಃ

ಪ್ರಶ್ನೆ-8: ಈ ಕೇಸಿಗೆ ಸಂಬಂಧಿಸಿದಂತೆ ನೀವು ಏನಾದರೂ ಹೇಳಲು ಇಚ್ಚಿಸುತ್ತೀರಾ?

ಉಃ

ಪ್ರಶ್ನೆ-9: ನಿಮ್ಮ ಪರ ಸಾಕ್ಷಿ ವಿಚಾರಣೆ ಇರುತ್ತದೆಯೇ ?

ಉಃ

*(ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ್ದು, ಅವರು ಅದನ್ನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ)*

Sd/-
**(** ಯೋಗೇಶ ಎಂ**.**ಆರ್**. )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಮೂಡಿಗೆರೆ.

ಮೂಡಿಗೆರೆ
ದಿನಾಂಕಃ 31.07.2026